ಶ್ರೀ ಜಿ, ಬಸವಣ್ಣಪ್ಪ.—ಇಲ್ಲ, ಇಲ್ಲ. ಈಗ ಅದು ಏನಾಗಿದೆ ಎಂದರೆ...

ಶ್ರೀ ಗೋಪಾಲ ಮುಕುಂದ ಕಾನಡೆ.—ಅದನ್ನು...

ಅಧ್ಯಕ್ಷರು.—ನಾಲ್ಕು ಸಾರಿ ಉಪಪ್ರಶ್ನೆ ಕೇಳಿದ್ದೀರಿ ಕೂಡ್ರಿ. ತಾವು ಕೂಡ್ರಿ ಉತ್ತರ ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಕಾನಡೆಯವರ ಪ್ರಶ್ನೆ ಏನೆಂದರೆ, ಅಧಿಕಾರಿಗಳು ಅವರಿಗೆ ಯಾವ ಒಂದು ಸೌಲಭ್ಯ ಆ ಜನಗಳಿಗೆ ಸಿಕ್ಕಬೇಕಾಗಿತ್ತೋ ಅದನ್ನು ಸಿಗದ ಹಾಗೆ ಮಾಡಿದ್ದಾರೆ, ಮತ್ತು ಅದಕ್ಕೆ ಕಾರಣಕರ್ತರಾಗಿದ್ದಾರೆ ಎನ್ನತಕ್ಕಂಥದ್ದನ್ನು ನೀವು ಒಪ್ಪಿದ್ದೀರಿ, ಆ ರೀತಿ ತಪ್ಪು ಮಾಡುತ್ತಿರತಕ್ಕಂಥವರ ಮೇಲೆ ಏನು ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಜಿ, ಬಸವಣ್ಣಪ್ಪ.—ಹಿಂದೆ ಇರತಕ್ಕಂಥ ಕಾರ್ಯಕ್ರಮವನ್ನು ಲಿಖಿತ ಆಜ್ಞೆಯ ಪ್ರಕಾರ ಆ ಕಾರ್ಯಕ್ರಮವನ್ನು ರದ್ದು ಮಾಡಿದ್ದೇವೆಂದು ಸರ್ಕಾರ ಒಪ್ಪಿದೆ. ಬೇರೆ ಕಾರ್ಯಕ್ರಮಗಳಿಂದ ಆ ಜನಗಳಿಗೆ ಸಹಾಯ ಸಿಗುತ್ತಿದೆ. ನಾವು ಒಪ್ಪಿದ್ದು ಏನು ಎಂದರೆ ಈ ಕಾರ್ಯಕ್ರಮಗಳನ್ನು ರದ್ದು ಮಾಡಿದ್ದೇವೆ, ಲಿಖಿತವಲ್ಲಿ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ಇದನ್ನು ರದ್ದು ಮಾಡಿದೆ ಎಂದು ಸರ್ಕಾರ ಒಪ್ಪಿದೆ ಎಂಬ ಹೇಳಿಕೆಯನ್ನು ಕೊಟ್ಟಿದ್ದೇವೆ.

ೇ. ಎಸ್. ಐ. ಯೋಜನೆಗೆ ವಂತಿಗೆ

೧೨೪೦. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೇ. ಎಸ್. ಐ. (ನೌಕರರ ರಾಜ್ಯ ವಿಮೆ)ನ್ನು ಸಂದಾಯ ಮಾಡುತ್ತಿರುವವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಪ್ರತ್ಯೇಕ ವಿವರಗಳನ್ನೊದಗಿಸುವುದು ?

ಆ) ಈಗ ೇ.ಎಸ್.ಐ.ಗೆ ವಂತಿಗೆ ಪಾವತಿ ಮಾಡದ ಖಾಸಗಿ ಸರ್ಕಾರಿ ಹಾಗೂ ಕೇಂದ್ರೋದ್ಯಮಗಳ ಸಂಖ್ಯೆ ಎಷ್ಟು ? (ಪ್ರತಿಯೋರ್ವರ ವಿವರಗಳು)

ಇ) ೇ. ಎಸ್. ಐ.ಗೆ ವಂತಿಗೆ ಮಾಡದ ಸಂಸ್ಥೆಗಳ ಮೇಲೆ ಸರ್ಕಾರದವರು ಕೈಗೊಂಡಿರುವ ಕಾನೂನು ಕ್ರಮ ಹಾಗೂ ಇಲಾಖಾ ಕ್ರಮಗಳೇನು ?

ಶ್ರೀ ಎಸ್. ಕೆ. ಕಾಂತಾ (ಮಾನ್ಯ ಕಾರ್ಮಿಕ ಸಚಿವರು).—

ಅ) ೇ.ಎಸ್.ಐ. ವಂತಿಗೆಯನ್ನು ಪಾವತಿ ಮಾಡುತ್ತಿರುವ ಉದ್ಯಮಗಳ ಸಂಖ್ಯೆ ೫೨೩೮. ಕಾರ್ಮಿಕರ ರಾಜ್ಯ ವಿಮಾ ನಿಗಮದವರು ಜಿಲ್ಲಾವಾರು ವಿವರಗಳನ್ನು ಪ್ರತ್ಯೇಕವಾಗಿ ಇಟ್ಟಿಲ್ಲ.

ಆ) ೨೭ ಖಾಸಗಿ, ೧೪ ರಾಜ್ಯ ಸರ್ಕಾರಿ ಮತ್ತು ಒಂದು ಕೇಂದ್ರೋದ್ಯಮ ೇ.ಎಸ್.ಐ.ಗೆ ವಂತಿಗೆ ಪಾವತಿ ಮಾಡಿಲ್ಲ. ವಿವರಗಳನ್ನು ಅನುಬಂಧ ೧ ಮತ್ತು ೨ ರಲ್ಲಿ ಕೊಡಲಾಗಿದೆ.

ಇ) ಹಣ ಪಾವತಿ ಮಾಡದಿರುವವರ ಮೇಲೆ ಸೆಕ್ಷನ್ ೪೦ಬಿ ಐ.ಪಿ.ಸಿ. ಮತ್ತು ಸೆಕ್ಷನ್ ೮೫ ೇ.ಎಸ್.ಐ. ಕಾಯಿದೆ, ೧೯೪೮ರ ಪ್ರಕಾರ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಜಿಲ್ಲಾಧಿಕಾರಿಗಳಿಗೆ ಬಾಕಿ ಇರುವ ೇ.ಎಸ್.ಐ. ವಂತಿಗೆ ಹಣವನ್ನು ಭೂ ಕಂದಾಯದ ಬಾಕಿ ಹಣವೆಂದು ಪರಿಗಣಿಸಿ ವಸೂಲು ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

Private Factories

Sl. No.	Name of the Employer
1	Akay Industries, Hubli
2	Guldas Thimmaiah Oil Mills, Raichur
3	Munirabad Chemicals, Munirabad
4	A. C. C. Shahabad
5	Bellary Spinning & Weaving Mills, Bellary
6	K. R. Mills, Mysore
7	Mysore Auto Agencies, Mysore
8	Premier Tile Works, Mangalore
9	Central Arcanut Marketing Ltd., Mangalore
10	Andhra Steel Corporation Ltd., Bangalore
11	Mysore Machinery Manufacturing Co., Bangalore
12	Deepak Insulated Cables Corporation, Bangalore
13	S. M. Kannappa Automobiles, Bangalore
14	Rukmini Steel Industries, Bangalore
15	Metro Malleable Manufacturing Ltd., Bangalore
16	P. M. Madurai Mudaliar & Sons, Bangalore
17	Jaya Karnataka New Printers, Bangalore
18	Khoday Industries, Bangalore
19	Mantons pvt. Ltd., Bangalore
20	Karnataka Journals & Publications Pvt. Ltd., Bangalore
21	Central Workshop, Bangalore
22	Patternr, Bangalore
23	Gokuldas Shirt Works, Unit-II, Bangalore
24	Gnaneshwas Textiles, Davangere
25	Shankar Textile Mills, Davangere
26	Siddeswara Mills, Davangere
27	Chigateri Mills, Davangere

ಅನುಬಂಧ — 2

State Government Factories

Sl. No.	Name of the Employer	Code No.	Period	Amount
1	K.S.R.T.C., Hubli	53-0645	1/85 to 8/86	12,39,954.42
2	Mahadeva Textiles, Hubli	53-1556	1975 to 1982	8 70,603.80
3	P.W.D. Water Works, Munirabad	53-1097	1973 to 1986	1.30,011.40
4	Khadi Gramodyoga Sangh, Raichur	53-3515	1981 to 1986	2,61,038.71
5	K.S.R.T.C, Gulbarga	53-0659	1985 to 1986	11.94,320.00
6	K.S.R.T.C, Banni-mantap. Mysore	53-0845	1968 to 72 & 82	97 396.00
7	K.S.R.T.C. Mysore	53-5930	1986	5,92,337.00
8	Mysore Sugar Co.Ltd, Mandya	53-0263	1981 to 1986	1,22,460.00
9	K.S.R.T.C., Bangalore	53-0767	1977 to 1981	90,665.20
10	Karnataka Food & Civil Supplies, Bangalore	53-6262	1/85 to 3/87	18,08,257.00
11	Bangalore University Press, Bangalore	53-4364	1975 to 1985	1.62.860.40
12	K.S.T.D.C. Workshop. Bangalore	53-3480	1979 to 1986	1,88,923.75
13	Vanivilas Water Works. Chitradurga	53-2734	1973 to 86	2,29,627.79
14	K.S.R.T.C. Shimoga	53-1637	1985 to 1986	1,09,674.20

Central Government Factory

1	H.A.L,. Bangalore (only interest)	53-0075	1984	4,14 303.20
			Total	75,07,432.83

ಶ್ರೀ ಎಸ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಅನುಬಂಧ ೧ ಮತ್ತು ೨ ರಲ್ಲಿ ಪ್ರೈವೇಟ್ ಫ್ಯಾಕ್ಟರಿಗಳ ಹೆಸರನ್ನು ಕೊಟ್ಟಿದ್ದಾರೆ. ಅನುಬಂಧ ೨ರಲ್ಲಿ ೧೧ಳ ಸರ್ಕಾರಿ ಉದ್ಯಮಗಳ ಹೆಸರನ್ನು ಕೊಟ್ಟಿದ್ದಾರೆ. ಅನುಬಂಧ ೨ರಲ್ಲಿ ಕೋಡ್ ನಂಬರ್ ಕೊಟ್ಟಿದ್ದಾರೆ. ಹಣವನ್ನು ಎಷ್ಟು ಪಾವತಿ ಮಾಡಿಲ್ಲವೆಂದು ಕೊಟ್ಟಿದ್ದಾರೆ. ಇದು ಬರೀ ಸರ್ಕಾರದ್ದು ಮಾತ್ರ ಕೊಟ್ಟಿದ್ದಾರೆ. ಆದರೆ ಖಾಸಗಿಯವರದ್ದು ಬರೀ ಹೆಸರನ್ನು ಮಾತ್ರ ಕೊಟ್ಟಿದ್ದಾರೆ. ಯಾತಕ್ಕೆ ಅವರ ಹೆಸರನ್ನು ಪೂರ್ಣವಾಗಿ ನೀಡಿಲ್ಲ. ಕೊಡಲಿಕ್ಕೆ ಧೈರ್ಯ ಇಲ್ಲವೇ ? ಅಥವಾ ದೊಡ್ಡ ದೊಡ್ಡ ತಿಮಿಂಗಿಲಗಳು ಇದರಲ್ಲಿ ಇದ್ದಾವೆಯೆಂದು ಕೊಡಲಿಲ್ಲವೇ, ಖೋಡೆ ಕಂಪನಿ, ಬಾಟ್ಲಿಂಗ್ ಲಿಕ್ಕರ್, ಇಂತಹವರ ಹೆಸರನ್ನು ಮಾತ್ರ ಕೊಟ್ಟಿದ್ದೀರಿ, ಆದರೆ ಅವರು ಎಷ್ಟು ಹಣವನ್ನು ಪಾವತಿ ಮಾಡಿದ್ದಾರೆಂದು ಕೊಟ್ಟಿಲ್ಲ. ಎಲ್ಲಾ ವಿಷಯಗಳನ್ನು ಮಬ್ಬುಮಬ್ಬಾಗಿ ಇಲ್ಲದೆ ತಿಳಿಸಬೇಕು. ಜಿಲ್ಲಾವಾರು ವಿವರಗಳನ್ನು ನಾನು ಕೇಳಿದ್ದೇನೆ. ಜಿಲ್ಲಾವಾರು ವಿವರಗಳನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಅಡ್ಯಂತಾಯ ಅವರಿಗೆ ಗೊತ್ತಿದೆ ಏನೆಂದರೆ, ರೀಜನಲ್ ಡೈರೆಕ್ಟರ್ ಇ.ಎಸ್.ಐ. (ಡೈರೆಕ್ಟರೇಟ್ ಆಫ್ ರೀಜನಲ್ ಆಫೀಸ್) ಸೆಂಟ್ರಲ್ ಗವರ್ನಮೆಂಟ್‌ಗೆ ಸಂಬಂಧಪಟ್ಟದ್ದು ಎಂದು, ಆದರೂ ಕೆಲವು ವಿವರಗಳನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ಉದ್ದೇಶದಿಂದ ವಿವರಗಳನ್ನು ತಿಳಿದುಕೊಂಡು ಬಂದಿದ್ದೇನೆ. ಅದರ ಪ್ರಕಾರ ಪ್ರೈವೇಟ್ ಸೆಕ್ಟಾರ್‌ನಲ್ಲಿ ಯಾವ ಯಾವ ಫ್ಯಾಕ್ಟರಿಗಳು ಬಾಕಿ ಎಷ್ಟು ಇದೆ. ಅವುಗಳ ವಿವರಗಳನ್ನು ಕೊಡುತ್ತೇನೆ.

ಕ್ರ.ಸ.	ಇಂಡಸ್ಟ್ರಿಯ ಹೆಸರು	ಬಾಕಿ ಹಣ
೧	೨	೩
೧	ಎ.ಕೆ. ಇಂಡಸ್ಟ್ರೀಸ್, ಹುಬ್ಬಳ್ಳಿ	೧,೨೭,೫೨.೦೬
೨	ಗುಲ್ಬರ್ಗಾ ಶಿವಮ್ಮಯ್ಯ ಆಯಿಲ್ ಮಿಲ್ಸ್ ರಾಯಚೂರು	೧,೦೨,೩೮೪.೭೦
೩	ಮಂಸಿರಾಬಾದ್ ಕೆಮಿಕಲ್ಸ್ ಮಣಿರಾಬಾದ್	೨,೩೯,೫೨೮.೦೦
೪	ಎ.ಸಿ.ಸಿ. ಶಹಾಬಾದ್	೨,೯೦,೦೦೬.೮೬
೫	ಬಳ್ಳಾರಿ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್ ಬಳ್ಳಾರಿ	೧೨,೧೬,೫೨೩.೪೦
೬	ಕೆ.ಆರ್. ಮಿಲ್ಸ್, ಮೈಸೂರು	೨೭,೬೩,೦೯೭.೪೦
೭	ಮೈಸೂರು ಆಟೋ ವಿಜನ್ಸೀಸ್ ಮೈಸೂರು	೧,೩೦,೬೩೨.೨೪
8	Premier Tile Works, Mangalore	1,03,529.00
9	Central Arcaunut Marketing Ltd., Mangalore	1,32,009.00
10	Andhra Steel Corporation Ltd., Bangalore	1,89,832.51
11	Mysore Machinery Manufacturing Company Bangalore	1 49,829.57
12	Deepak Insulated Cable Corporation Bangalore	1,49,283.15

1	2	3
13	S.M. Kannappa Automobiles Bangalore	1,49,929.30
14	Rukmini Steel Industries, Bangalore	1,01,048.64
15	Metro Malleables Mfg. Ltd., Bangalore	2,42,197.50
16	P. M. Madurai Mudaliar and Sons Bangalore	1,17,967.90
17	Jayakarnatak new Printers Bangalore	1,37,060.55
18	Khoday Industries Bangalore	1,60,825.00
19	Manlons Pvt. Ltd., Bangalore	1,61,271.75
20	Karnataka Journals and Publications Pvt. Ltd., Bangalore	1,17,667.84
21	Central Workshop Bangalore	2,31,736.90
22	Patterns, Bangalore	1,12,746.00
23	Gokuldas Shirt Works, Unit-II Bangalore	1,02,563.45
24	Gnaneshwar Textiles, Davanagere	8,66,577.20
25	Shankar Textile Mills Devanagere	6,66,674.25
26	Siddeswara Mills Devanagere	6,52,043.00
27	Chigateri Mills Devanagere	4,30,981.00
	Total	98,44,465.31

ಶ್ರೀ ಎಂ. ಎನ್. ಆಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇದು ಕೇಂದ್ರ ಸರ್ಕಾರದ ಅಧೀನದಲ್ಲಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ ಕಾರ್ಪೊರೇಷನ್ ಅನ್ನು ಮಾಡುತ್ತಾ ಇದೆ, ಆದರೆ ಹಣ ಯಾವುದೂ ಬಾಕಿ ವಸೂಲಿ ಬಗ್ಗೆ ನೋಟೀಸ್ ಜಾರಿ ಮಾಡುವುದೂ ಇವರೇ. ಮಾನ್ಯ ಮಂತ್ರಿಗಳು ರೀಜನಲ್ ಬೋರ್ಡ್ ಯಾತಕ್ಕಾಗಿ ಮಾಡಿದ್ದಾರೆ. ರೀಜನಲ್ ಬೋರ್ಡ್ ಅಧ್ಯಕ್ಷರೂ ಇವರೇ. ಖಾಸಗಿಯವರು ಮೆಡಿಕಲ್, ಡೆಂಟಲ್ ಕಾಲೇಜುಗಳನ್ನು ಸ್ಟಾರ್ಟ್ ಮಾಡುವಾಗ ಕೇಂದ್ರ ಸರ್ಕಾರದ ಅನುಮತಿ ಕೇಳುವುದಿಲ್ಲ. ಈಗ ಮಾತ್ರ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದಕ್ಕೆ ಹೊರಟ್ಟಿದ್ದಾರೆ. ಡೆಂಟಲ್ ಕಾಲೇಜು ಸ್ಟಾರ್ಟ್ ಮಾಡಲಿಕ್ಕೆ ಕೇಂದ್ರ ಸರ್ಕಾರದ ಅನುಮತಿ ತೆಗೆದುಕೊಂಡಿಲ್ಲ. ಆದರೆ ಇಲ್ಲಿ ಯಾವ ಕಾರ್ಮಿಕರಂ ತಮ್ಮ ಪಾಲಿನ ವಂತಿಗೆಯನ್ನು ಕೊಟ್ಟಿದ್ದಾರೆ ಅದನ್ನು ಸಂಬಂಧಪಟ್ಟ ಮಾಲೀಕರುಗಳಿಂದ ವಸೂಲಿ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಈ ಹಣ ವಸೂಲಿ ಮಾಡುವುದು ತಮ್ಮ ಪರಿಮಿತಿಯಲ್ಲಿ ಬರುತ್ತದೆ. ಹಣ ಪಾವತಿ ಮಾಡದಿರುವವರ ಮೇಲೆ ಸೆಕ್ಷನ್ ೪೧೬ ಐ. ಪಿ. ಸಿ. ಮತ್ತು ಸೆಕ್ಷನ್ ೬೫ ಇ. ಎಸ್. ಐ. ಕಾಯಿದೆ ೧೯೪೮ರ ಪ್ರಕಾರ ಕ್ರಮ ತೆಗೆದುಕೊಳ್ಳಬಹುದೆಂದು ನೀವೇ ಉತ್ತರದಲ್ಲಿ ಹೇಳಿದ್ದೀರಿ. ಇದರ ಪ್ರಕಾರ ಬಾಕಿ ಇರುವ ಇ.ಎಸ್.ಐ. ಮಂತಿಗೆ ಹಣವನ್ನು ಭೂಕಂದಾಯದ ಬಾಕಿ ಹಣವೆಂದು ಪರಿಗಣಿಸಿ ವಸೂಲು ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಮ್ಮ ಉತ್ತರದಲ್ಲಿಯೇ ಹೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ಯಾವ ಯಾವ ಕ್ರಮ

ತೆಗೆದುಕೊಂಡಿದ್ದಾರೆ ? ಏತಕ್ಕೆ ಅವರು ಇಷ್ಟರವರೆಗೆ ವಸೂಲಿ ಮಾಡಿಲ್ಲ ? ಈ ಬಾಕಿ ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಇಲ್ಲಿ ಇ. ಎಸ್. ಐ. ಯಂತಿಗೆಯನ್ನು ಪಾವತಿ ಮಾಡುತ್ತಿರುವವರ ಸಂಖ್ಯೆ ೫೨೩೮ ಎಂದು ಹೇಳಿದ್ದೀರಿ. ಆದರೆ ಇದು ಬಹಳ ಹಳೆಯ ಕಾಲದ ಸಂಖ್ಯೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಷ್ಟು ಉದ್ಯಮಗಳನ್ನು ಈ ಇ. ಎಸ್. ಐ. ಕಾನೂನಿನ ಪರಿಮಿತಿಯಲ್ಲಿ ತಂದಿದ್ದೀರಿ ? ಇದನ್ನು ತಮ್ಮ ಉತ್ತರದಲ್ಲಿ ಹೇಳಿಲ್ಲ. ಮಾನ್ಯ ಜೆ. ಎಚ್. ಪಟೇಲ್ ಅವರು ಒಂದು ದಿವಸಕ್ಕೆ ಒಂದು ಉದ್ಯಮವಂ ಸ್ಥಾಪನೆ ಮಾಡಲು ಅನುಮತಿ ನೀಡಲಾಗುವುದು ಮತ್ತು ಸಾವಿರಾರು ಜನರಿಗೆ ಉದ್ಯೋಗ ನೀಡಲಾಗುವುದೆಂದು ಹೇಳುತ್ತಿರುವಾಗ ಆ ಅಂಕಿಅಂಶಗಳನ್ನೆಲ್ಲಾ ಇದರಲ್ಲಿ ಸೇರಿಸಿದ್ದೀರಾ ಹೇಗೆ ಎಂಬುದನ್ನು ತಾವು ಹೇಳಬೇಕು ?

ಅಧ್ಯಕ್ಷರು.— ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದನ್ನು ಹೇಳಿ ?

ಶ್ರೀ ಎಸ್. ಕೆ. ಕಾಂತ.—ಈಗಾಗಲೇ ಹೇಳಿದ್ದೇನೆ. ನೌಕರರ ರಾಜ್ಯ ವಿಮಾ ಯಂತಿಗೆಯನ್ನು ಪಾವತಿ ಮಾಡದ ಕೇಂದ್ರದ ಒಂದು ಸೇರಿ ಸರ್ಕಾರಿ ಪಲಯದಲ್ಲಿನ ಸಂಸ್ಥೆಗಳು ಒಟ್ಟು ೧೫ ಯಂತಿಗೆ ಮೊತ್ತ ರೂ. ೭೫,೦೫,೪೫೨-೮೩ ಲಕ್ಷ. ಖಾಸಗಿ ಸಂಸ್ಥೆಗಳವರ ಒಟ್ಟು ಸಂಖ್ಯೆ ೨೭. ಯಂತಿಗೆ ಮೊತ್ತ ರೂ. ೯೮,೪೪,೪೬೧.೪೧ ಲಕ್ಷಗಳು. ಐ. ಪಿ. ಸಿ.ಯ ಸೆಕ್ಷನ್ ೪೦೬ ಮತ್ತು ಕಾರಾವಿ ಕಾಯ್ದೆ ೧೯೪೮ರ ಸೆಕ್ಷನ್ ೮೫ರ ಪ್ರಕಾರ ಈ ಬಾಕಿ ಹಣವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾಧಿಕಾರಿಗಳಿಗೆ ಬಾಕಿ ಹಣವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಜನವರಿ ೧೯೮೭ ರಿಂದ ಫೆಬ್ರುವರಿ ೧೯೮೮ರ ವರೆಗೆ ೬೬೩ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದ್ದು ೨೪೮ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ. ಎಲ್ಲ ಪ್ರಕರಣಗಳಲ್ಲಿಯೂ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲು ಕಾರಾವಿ ನಿಗಮದ ಅಧಿಕಾರಿ ವರ್ಗ ಕಾಲಕಾಲಕ್ಕೆ ಕ್ರಮ ತೆಗೆದುಕೊಳ್ಳುತ್ತಿದೆ. ಇ. ಎಸ್. ಐ. ಬಾಕಿ ಇರುವ ಹಣವನ್ನು ವಸೂಲಿ ಮಾಡಿದಾಗ ವರ್ಷಕ್ಕೆ ಶೇಕಡಾ ೧೮ ರಷ್ಟು ದಂಡದ ಬಡ್ಡಿಯನ್ನು ಮತ್ತು ವರ್ಷಕ್ಕೆ ಶೇಕಡಾ ೬ ರಷ್ಟು ಮಂಜೂರಿಸಿದ ದಂಡದ ಬಡ್ಡಿಯನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಇ. ಎಸ್. ಐ. ಯೋಜನೆಯ ಂ ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವುದರಿಂದ ಈ ಹೆಚ್ಚಿನ ಮಾಹಿತಿಗಳು ರಾಜ್ಯ ಸರ್ಕಾರದಲ್ಲಿ ಇರುವುದಿಲ್ಲ. ತಪ್ಪಿತಸ್ಥರಾಗಿರುವ ಎಲ್ಲಾ ಪ್ರಕರಣಗಳಲ್ಲಿಯೂ ಇ.ಎಸ್ ಐ. ಯಂತಿಗೆಯನ್ನು ವಸೂಲು ಮಾಡಲು ಎಲ್ಲ ಜಿಲ್ಲಾಧಿಕಾರಿಗಳಿಗೂ ಮತ್ತು ವಿಭಾಗಾಧಿಕಾರಿಗಳಿಗೂ ಸೂಕ್ತ ಆದೇಶವನ್ನು ಕೊಡಲಾಗಿದೆ. ಆದರ ಪ್ರಕಾರ ಹಣ ವಸೂಲಿ ಆಗುತ್ತಿದೆ. ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಬೇರೆ ಏನಾದರೂ ಮಾಹಿತಿ ಬೇಕಾಗಿದ್ದರೆ, ಆ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಪ್ರಶ್ನೆ. ೧೨೩೧. (ಮಾನ್ಯ ಸದಸ್ಯರು ಹಾಜರಿಲ್ಲ)

ಬರ ಪರಿಹಾರಕ್ಕೆ ವೆಚ್ಚ ಮಾಡಿದ ವಿವರ

೧೧೮೧. ಶ್ರೀ ಜಿ. ರಾಜುಗೌಡ (ಹನೂರು) ಹಾಗೂ ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರ ೧೯೮೩ ರಿಂದ ಇಲ್ಲಿಯವರೆವಿಗೆ ಬರ ಪರಿಹಾರಕ್ಕೆ ಎಷ್ಟು ವೆಚ್ಚ ಮಾಡಿದೆ ?

ಆ) ಇದರಲ್ಲಿ ಕೇಂದ್ರ ಸರ್ಕಾರವು ನೀಡಿರುವ ಪೊತ್ತವೆಷ್ಟು ?

ಇ) ಇದರಲ್ಲಿ ಕೂಲಿಗಾಗಿ ಬಳಸಲಾದ ಆಹಾರ ಧಾನ್ಯ ಎಷ್ಟು ಹಾಗೂ ಧಾನ್ಯದ ಮೌಲ್ಯ ವೆಷ್ಟು ?